# ವಿಶ್ವಮಾನವ

ನಾವು ಜನ್ಮಜಾತವಾಗಿ ವ್ಯಕ್ತಿಗಳು. ಆದರೆ, ಬೆಳೆದಂತೆ ವ್ಯಕ್ತಿಮೆಯಿಂದ ವಿಶ್ವಾರಾಧಕರು. ವಿಶ್ವ, ವಿಶ್ವಮಾನವ ಎಂಬಂಥ ಮಾತುಗಳು ಕುವೆಂಪು ಅವರ ಮೂಲಕ ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿವೆ. ನಾವು ಕುಟುಂಬಪ್ರಿಯರು. ನಮಗೆ ಮೊದಲು ಕುಟುಂಬ, ಅನಂತರ ಸಮಾಜ. ಆಮೇಲೆ ರಾಷ್ಟ್ರ. ಇದು ಒಂದೊಂದು ಸೀಮೆಯಲ್ಲಿ ನಾವು ನಡೆಯುವ ಕ್ರಮ. ಈ ಕ್ರಮವು ಪುರಾತನರ ಪ್ರಕಾರ 'ವಸುಧೈವ ಕುಟುಂಬಕಮ್'. ಈ ಮಾತಿನಲ್ಲಿ 'ವಸುಧಾ ಏವ ಕುಟುಂಬಕಮ್' ಎಂದಿರುವುದು ಸರಿಯಷ್ಟೆ. ವಸುಧಾ ಎಂದರೆ ಜಗತ್ತು–ವಿಶ್ವ; ಕುಟುಂಬಕಮ್ ಎಂದರೆ ಕುಟುಂಬ. ನಾವು ಸಣ್ಣ ಕುಟುಂಬದ ರುಚಿಯನ್ನು ಉಂಡವರಷ್ಟೆ. ಆ ರುಚಿಯಲ್ಲೇ ಇದ್ದವರು. ಆದರೆ, ಸಣ್ಣದು ದೊಡ್ಡದಾದಾಗ ಉಂಟಾಗುವ ಭಾವ ಏನುಂಟೋ ಅದು ಅತ್ಯಂತ ವಿಲಕ್ಷಣವಾದದ್ದು. ಮೇಲಿನ ಸಂಸ್ಕೃತದ ಮಾತಿನಲ್ಲಿ 'ವಿಶ್ವವೆಲ್ಲವೂ ನನ್ನದೇ' ಎಂಬ ಆಪ್ತಭಾವವೊಂದು ಮನೆಮಾಡಿದೆ. ಈ ಆಪ್ತಭಾವ ನಮ್ಮಲ್ಲಿ ಉದಿಸಬೇಕಾದರೆ, ಅಲ್ಪಮಾನವರಿಗೆ ಸಾಧ್ಯವಿಲ್ಲ. ಅದು ಉದಾರಭಾವದ ಚಿತ್ತರಿಗೆ ಮಾತ್ರ ಸಾಧ್ಯ. ಆ ಮಾತಿನ ಅಂತರಾರ್ಥ ತಿಳಿಯಬೇಕಾದರೆ ಸಂಪೂರ್ಣ ಶ್ಲೋಕವನ್ನು ಒಮ್ಮೆ ನೋಡೋಣ:

ಅಯಂ ಬಂಧುರಯಂ ನೇತಿ ಗಣನಾ
ಲಘುಚೇತಸಾಮ್!
ಉದಾರಚರಿತಾನಾಂ ತು
ವಸುಧೈವಕುಟುಂಬಕಮ್ !6.27!

ಇವನು ನನ್ನವನು; ಇವನು ನನ್ನವನಲ್ಲ, ಬೇರೆಯವನು. ಈ ರೀತಿ ಅಲ್ಪಮನಸ್ಸಿನವರು ಮಾತ್ರ ಎಣಿಕೆ ಮಾಡುತ್ತಾರೆ. ಆದರೆ, ಉದಾರಚರಿತರಾದವರು ಇಡೀ ವಿಶ್ವವೇ ತನ್ನ ಮನೆಯೆಂದು ಎಣಿಸುವರು. ಇದು ಮಹೋಪನಿಷತ್ತಿನಲ್ಲಿ ಬರುತ್ತದೆ. ಇದು ಮಹಾಭಾರತದಲ್ಲಿರುವ ಪ್ರಾಚೀನ ಪಾಠವೆಂದು ವಿದ್ವಾಂಸರು ಪರಿಗಣಿಸುತ್ತಾರೆ.

ನಾವು ಸ್ವಾರ್ಥದ ದಾಸರಾಗಿದ್ದೇವೆ. ನಮ್ಮಲ್ಲಿರುವ ಈ ಸ್ವಾರ್ಥಭಾವವೇ ಜಗತ್ತನ್ನು ದೂರೀಕರಿಸುತ್ತದೆ. ಇಂದಿನ ಸಮಾಜ ಸ್ವಾರ್ಥದ ನೆಲೆಯಲ್ಲೇ ಕೊಳೆಯುತ್ತಿದೆ. ಆದರೆ, ಪಶು, ಪಕ್ಷಿ, ಕ್ರಿಮಿಕೀಟಾದಿಗಳಲ್ಲಿ ಬಹುಪಾಲು ಅನ್ಯಜೀವಿತದ ಆಕಾಂಕ್ಷೆಯುಳ್ಳವೇ ಹೆಚ್ಚು. ತಾನು ಬದುಕಿ ಇನ್ನೊಬ್ಬರನ್ನು ಬದುಕಿಸಿಕೊಳ್ಳುವ ಸಾರತಂತ್ರವೇ ವಿಶ್ವಮಾನವ ಪ್ರಜ್ಞೆ. ಮಹಾಕವಿ ಕುವೆಂಪು 'ವಿಶ್ವಮಾನವ ಗೀತೆ'ಯನ್ನು ರಚಿಸಿದ್ದು ಇದೇ ತಂತ್ರದ ಮೇಲೆಯೇ. ಸ್ವಾರ್ಥಭಾವದಿಂದ ಪರಾರ್ಥಭಾವದ ಕಡೆಗೆ ಮನುಷ್ಯ ಚಲಿಸಿದಂತೆಲ್ಲಾ ಅವನಲ್ಲಿ ಅಲ್ಪತ್ವವು ಕಳೆದು, ಭೂಮತ್ವವು ಮೈಗೂಡುತ್ತದೆ. ಇಲ್ಲಿ ವ್ಯಷ್ಟಿತತ್ತ್ವಕ್ಕೆ ಇಂಬಿಲ್ಲ; ಸಮಷ್ಟಿ ತತ್ತ್ವವೇ ತುಂಬಿ ತುಳುಕುತ್ತದೆ. ರಾಮಾಯಣದ ಶ್ರೀರಾಮ, ಭಾಗವತದ ಶ್ರೀಕೃಷ್ಣ, ಭಾರತದ ಧರ್ಮರಾಯ ವಿಶ್ವಮಾನವರು. ಪಂಪನು ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರನ್ ಎಂದಿದ್ದಾನಷ್ಟೆ. ಪೊನ್ನ ತನ್ನ 'ಶಾಂತಿಪುರಾಣ'ದಲ್ಲಿ ಜಿನಚಂದ್ರ ಮುನಿಗಳಿಗೆ 'ವಸುಧೈವಕ ಕುಟುಂಬಕಮ್' ಎಂದು ಸಾರ್ಥಕ ವಿಶೇಷಣವನ್ನು ನೀಡಿರುವುದು ಗಮನೀಯ. ಸಂಸ್ಕೃತ ಸಾಹಿತ್ಯದಲ್ಲಿ ಕಂಡುಬರುವ 'ವಿಶ್ವಮಾನವ ಪ್ರಜ್ಞೆ'ಯು ಪಂಪನೇ ಆದಿಯಾಗಿ ನಮ್ಮ ಕಾಲದವರೆಗೆ ಕಾವ್ಯ, ಶಾಸನಗಳಲ್ಲೂ ನಮ್ಮ ಕಾಲದಲ್ಲೂ 'ಇಡೀ ವಿಶ್ವವೇ ತನ್ನ ಮನೆ' ಎಂದು ಭಾವಿಸುವ ಪರಂಪರೆಗೆ ಇಂಬುಂಟು.

ಕುವೆಂಪು ಅವರ 'ವಿಶ್ವಮಾನವ ಗೀತೆ'ಯು ಸಮಸ್ತವನ್ನೂ ತನ್ನದೆಂದೇ ಭಾವಿಸುತ್ತದೆ. ಇಲ್ಲಿ ಅಲ್ಪತೆಗೆ ಅವಕಾಶವಿಲ್ಲ. ನಾವು ಕಾಣುವುದೆಲ್ಲವೂ ಭೂಮವೇ. ಇದು ಉಪನಿಷತ್ತಿನ ದೃಷ್ಟಿ. ಸಕಲವೂ ತನ್ನ ಕುಟುಂಬ ಎಂಬ ಭಾವದ ಎತ್ತರಕ್ಕೆ ಏರಿದಾಗ; ಅಲ್ಲಿ ವರ್ಣ, ಪಂಥ, ಆಶ್ರಮ, ಪಂಗಡ, ಭಾಷೆ, ಮತ – ಇವೆಲ್ಲವೂ ನಗಣ್ಯವಾಗುತ್ತವೆ. ಅವನು ಎಲ್ಲವನ್ನೂ ಮೀರಿಹೋಗುತ್ತಾನೆ. ಭೇದವು ಕಳೆದುಹೋಗಿ ಅಭೇದವೇ ತಾನೇತಾನಾಗಿ ಬಿಡುತ್ತದೆ. ಇದು 'ಉದಾರ'ಭಾವ ಉಳ್ಳವರಿಗೆ ಮಾತ್ರ ಸಾಧ್ಯ. ಅಂತರಂಗದಲ್ಲಿ ಆಸೆಗಳು ಇಲ್ಲವಾಗಬೇಕು. ಬಹಿರಂಗದಲ್ಲಿ ಲೋಕಹಿತವೇ ಸದಾ ಕಾಣುತ್ತಿರಬೇಕು. ಪರಿಶುದ್ಧ ನಡೆ–ನುಡಿ ಎರಡನ್ನೂ ಆತ ತಾಳಿರಬೇಕು. ಇವನನ್ನು ಉಪನಿಷತ್ತು 'ಉದಾರ' ಎಂದು ಕರೆದು ವ್ಯಾಖ್ಯಾನಿಸಿದೆ. ಇಂಥ ಉದಾರವಾದ ಮನೋಧರ್ಮವನ್ನು ಪ್ರತಿಬಿಂಬಿಸುವ ನೂರಾರು ಕಥನಗಳು ನಮ್ಮ ಸಾಹಿತ್ಯದಲ್ಲಿ ಸಿಗುತ್ತವೆ. ನಾಗಚಂದ್ರನೆಂಬ ಕನ್ನಡ ಕವಿಯು ಪಂಪರಾಮಾಯಣದಲ್ಲಿ ಉದಾತ್ತನೊಳ್ ಪುಟ್ಟಿದಲ್ತೆ ನೀಲೀರಾಗಂ ಎಂದಿದ್ದಾನೆ. ಉದಾತ್ತಚರಿತೆ, ಉದಾರಭಾವಗಳು, ನಮ್ಮ ಸಮಾಜವನ್ನು ಹಾಗೂ ಹೀಗೂ ಕೈಹಿಡಿದು ಈವರೆಗೂ ನಡೆಸಿವೆ. ಪಂಚತಂತ್ರದ ಹಲವು ಕತೆಗಳಲ್ಲಿ 'ಉದಾರಚರಿತ'ರ ಕಥನಗಳುಂಟು! ನೀವೊಮ್ಮೆ ವಿಕ್ರಮಚರಿತೆಯನ್ನು ನೆನಪಿಸಿಕೊಳ್ಳಿ. ಭೋಜರಾಜನು ನೆಲದ ಅಡಿಯಲ್ಲಿ ದೊರಕಿದ ಸಿಂಹಾಸನವನ್ನು ಏರಬೇಕೆಂದು ಬಯಸುತ್ತಾನೆ. ಆದರೆ, ಸಿಂಹಾಸನದ ಮೂವತ್ತೆರಡು ಮೆಟ್ಟಿಲುಗಳಲ್ಲಿ ಇದ್ದ ಗೊಂಬೆಗಳು ಒಂದೊಂದು ಗುಣವನ್ನು ಮುಂದಿಟ್ಟು ಒಂದೊಂದು ಕಥೆಯನ್ನು ಹೇಳುತ್ತವೆ. ಅಂಥ ಗುಣಗಳಲ್ಲಿ 'ಉದಾರತೆ'ಯೂ ಒಂದೆಂಬುದನ್ನು ನಾವು ಗಮನಿಸಬೇಕು.

ಭಗವದ್ಗೀತೆಯ 'ವಿಶ್ವರೂಪದರ್ಶನಯೋಗ'ವನ್ನು ನಾವೊಮ್ಮೆ ನೆನೆಯಬಹುದು. ಭಗವಂತ ವಿಶ್ವರೂಪನೇ ಸರಿ. ಆತನದು ವಿಶ್ವಸಂಸಾರ. ಅಲ್ಲಮಪ್ರಭು ಸೊನ್ನಲಿಗೆ ಸಿದ್ಧರಾಮನನ್ನು ಕಂಡಾಗ, ಲೋಕದ ಕೀಲಿಗೆ ಅಂಟಿಕೊಂಡ ಬಗೆಯನ್ನು ವ್ಯಂಗ್ಯದಿಂದ ರೇಗಿಸುತ್ತಾನೆ. ಆದರೆ, ಸಿದ್ಧರಾಮ ಶಿವಯೋಗದ ಸಮಸ್ಥಿತಿಯನ್ನು ಸಾರುತ್ತಾನೆ. ಇದು ನಾವು ಸಾಹಿತ್ಯದಿಂದ ಪಡೆಯಬಹುದಾದ ಮುಖ್ಯತತ್ತ್ವ. ನಮ್ಮ ದೇಶ ಮಾತ್ರವಲ್ಲ; ಎಲ್ಲ ದೇಶದ ಕಲೆ–ಸಾಹಿತ್ಯ–ಅಧ್ಯಾತ್ಮ ಇವೆಲ್ಲವೂ 'ವಿಶ್ವಮಾನವ ಆಗು' ಎಂಬ ಹಂಬಲಿಕೆಯನ್ನು ವ್ಯಕ್ತಪಡಿಸುತ್ತವೆ. ನಮ್ಮ ಸುತ್ತಮುತ್ತ ಇರುವ ಪ್ರಾಣಿ–ಪಕ್ಷಿಗಳು ಉದಾರತೆಯನ್ನು ಮೆರೆಯುವ ಪ್ರಸಂಗಾವಳಿಗಳನ್ನು ನಮ್ಮ ಲೇಖಕರು ಬರೆದದ್ದುಂಟು! ಆದರೆ, ನಾವು 'ಕಿರುಕುಳ'ದಲ್ಲಿ ಬಿದ್ದಿದ್ದೇವೆ. ಇದಕ್ಕೆ 'ಲಘುಚೇತಸ'ವೇ ಕಾರಣವಾಗಿದೆ. ಲಘುತ್ವವು ಪ್ರಬಲವಾದಾಗ 'ಗುರುತ್ವ'ವನ್ನು ಅದು ನುಂಗಿಬಿಡುತ್ತದೆ. ಆದರೆ, ಸೃಷ್ಟಿಯ ಮಹತ್ತೆಂದರೆ ಸಾತ್ವಿಕತೆಯೂ ಸತ್ವಗುಣದ ಪರಿಧಿಯನ್ನು ಎತ್ತಿಹಿಡಿಯುತ್ತದೆ. ನಮ್ಮ ಶಾಲೆಯಲ್ಲಿಯೂ ಮನೆಯಲ್ಲಿಯೂ ಇರುವ ಭವಿಷ್ಯತ್ತಿನ ಕುಡಿಗಳಿಗೆ ಜಾತಿ–ಬಣ್ಣ–ವೇಷ–ಮತ–ಪಂಥ–ಪಂಗಡಗಳ ತಮವು ಬೀರದಂತೆ ನೋಡಿಕೊಂಡಾಗ 'ವಿಶ್ವಮಾನವ' ಎಂಬುದು ಒಂದು ಕಲ್ಪನೆಯಾಗದೆ; ಅದು ಬದುಕಿನ ಸೃಷ್ಟಿಶೀಲ ಮನಸ್ಸಿಗೆ ಆಧಾರವಾಗುತ್ತದೆ. ಇದೇ ನಾವು ನಡೆಯಬೇಕಾದ ವಿಶ್ವಮಾನವತತ್ತ್ವ!

■ **ಪುರಂಜೀವಿ**

## ಮಾತೇ ಮುತ್ತು

- ಯಶಸ್ವಿಯಾಗುತ್ತೇನೆ ಎಂಬ ನಿರ್ಧಾರ ನಿಮ್ಮಲ್ಲಿ ಪ್ರಬಲವಾಗಿದ್ದರೆ ಸೋಲು ಎಂದಿಗೂ ನಿಮ್ಮನ್ನು ಹಿಮ್ಮೆಟ್ಟಿಸುವುದಿಲ್ಲ.
  —ಎ.ಪಿ.ಜೆ. ಅಬ್ದುಲ್ ಕಲಾಂ

- ದಿನಕ್ಕೆ ಒಮ್ಮೆಯಾದರೂ ನಿಮ್ಮ ಜತೆ ನೀವೇ ಮಾತನಾಡಿಕೊಳ್ಳಿ. ಇಲ್ಲವಾದರೆ ಜಗತ್ತಿನ ಅತ್ಯುತ್ತಮ ವ್ಯಕ್ತಿಯೊಂದಿಗಿನ ಸಂಭಾಷಣೆ ಕಳೆದುಕೊಳ್ಳುತ್ತೀರಿ.
  —ಸ್ವಾಮಿ ವಿವೇಕಾನಂದ

- ನನ್ನ ವೈಯಕ್ತಿಕ ಹಿತ ಮತ್ತು ಸಮಾಜದ ಹಿತದ ನಡುವೆ ವಿರೋಧವುಂಟಾದರೆ, ನನ್ನ ವೈಯಕ್ತಿಕ ಹಿತ ಬಲಿಕೊಟ್ಟು ಸಮಾಜದ ಹಿತ ಕಾಪಾಡುತ್ತೇನೆ. ಸಮಾಜದ ಹಿತ ಮತ್ತು ರಾಷ್ಟ್ರದ ಹಿತ ಸಂದರ್ಭದಲ್ಲಿ ಸಮಾಜದ ಹಿತ ಬಲಿಕೊಟ್ಟು ರಾಷ್ಟ್ರದ ಹಿತ ಕಾಪಾಡುತ್ತೇನೆ.
  —ಬಿ.ಆರ್. ಅಂಬೇಡ್ಕರ್

- ಕ್ರೌರ್ಯಕ್ಕೆ ಕ್ರೌರ್ಯವೇ ಉತ್ತರ ಎನ್ನುವವರು ನಿಶ್ಚಿತವಾಗಿಯೂ ಬೌದ್ಧಿಕ ದಾರಿದ್ರ್ಯವನ್ನು ಅನುಭವಿಸುತ್ತಿರುತ್ತಾರೆ. ಅದು ವಿಷವರ್ತುಲದ ಆರಂಭವಷ್ಟೆ.
  —ಮಹಾತ್ಮ ಗಾಂಧಿ

- ಬದುಕಿನ ಭಾರ ನಾವೇ ಹೊರಬೇಕು. ಉಳಿದವರ ಹೆಗಲು ಶವಯಾತ್ರೆಗಷ್ಟೇ ಸೀಮಿತ.
  —ಭಗತ್ ಸಿಂಗ್